ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).—

ಅ) ಹೌದು.

ಆ) ನೆಟ್ಟ ಕೋಕೋ ಗಿಡಗಳು ಸ್ಥಾಪನೆಯಾಗಿದ್ದರೂ ಸಹಿತ ಅದನ್ನು ಅರಣ್ಯದಲ್ಲಿ ಬೆಳೆಸಿರುವುದರಿಂದ ಮತ್ತು ಅವುಗಳ ಮೇಲೆ ಬೀಳುವ ಹೆಚ್ಚಿನ ನೆರಳಿನ ಕಾರಣದಿಂದಲೂ ಮತ್ತು ಕೋಕೋ ಗಿಡಗಳ ಕೊಂಬೆ ರೆಂಬೆಗಳನ್ನು ಸರಿಯಾಗಿ ತೆಗೆಯುವ ಮಾಹಿತಿ ಮುಂಚೆ ಇರದೆ ಇದ್ದುದರಿಂದಲೂ ಈ ತೋಪಿನ ಸ್ಥಿತಿ ಲಾಭದಾಯಕವಾಗಿರುವುದಿಲ್ಲ. ಅಲ್ಪ ಪ್ರಮಾಣದಲ್ಲಿ ಬರುವ ಹಣ್ಣುಗಳನ್ನು ಅರಣ್ಯ ಮೃಗಗಳು ಮತ್ತು ಹಕ್ಕಿಗಳು ತಿಂದು ಹಾಕುತ್ತಿವೆ.

ಕೇವಲ ೧೪.೦೦ ಹೆ. ಪ್ರದೇಶದಲ್ಲಿ ಮಾತ್ರ ಅರಣ್ಯ ಇಲಾಖೆಯು ೧೯೭೧–೭೨ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಈ ಕೋಕೋ ನೆಡುತೋಪುಗಳನ್ನು ಬೆಳೆಸಿತ್ತು.

ಇ) ಇಲ್ಲ.

ಈ) ವರಮಾನ ಇಲ್ಲದೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಯಾದಗಿರಿ ತಾಲ್ಲೂಕಿನಲ್ಲಿ ಮುಳುಗಡೆಯಾದ ಜಮೀನುಗಳಿಗೆ ಪರಿಹಾರ ಧನ

೧೯೬೮. ಶ್ರೀ ಶಿವಶೇಖರಪ್ಪ ಶಿರವಾಳ (ಶಹಾಪುರ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಬುರ್ಗಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಅಲ್ಲಿಪುರ ಕೆರೆಯ ನಿರ್ಮಾಣದಲ್ಲಿ ಸರ್ವೆ ನಂ. ೯೦ ಮತ್ತು ೯೧ ಮುಳುಗಡೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಮುಳುಗಡೆಯಾದ ಸರ್ವೆ ನಂ. ೯೦ ರ ಜಮೀನಿಗೆ ಪರಿಹಾರ ಹಣ ಕೊಡಲಾಗಿ ಸರ್ವೆ ನಂ. ೯೧ಕ್ಕೆ ಪರಿಹಾರ ಹಣ ಕೊಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

೧೯೮೩ ರಲ್ಲಿ ಹಾಗೂ ೧೯೮೪ ನೇ ಸಾಲಿನ ಅಂದಾಜುಗಳ ವಾಸ್ತವಿಕ ವೆಚ್ಚ.

೫೩೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆಯವ್ಯಯ ಕೈಪಿಡಿ ಸಮೂಹ ಸಂಖ್ಯೆ ೩, ೪, ೫, ೬, ೭ ಮತ್ತು ೮ರ ಪ್ರಕಾರ ೧೯೮೩–೮೪ ಮತ್ತು ೧೯೮೪–೮೫ರ ಮೊತ್ತ ಅಂದಾಜು ಮತ್ತು ಲೆಕ್ಕಗಳೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಆಯವ್ಯಯ ಕೈಪಿಡಿಯ ಸಮೂಹ ಸಂಖ್ಯೆ ೩, ೪, ೫, ೬, ೭ ಮತ್ತು ೮ ಅಂದಾಜು ಅಧಿಕಾರಿಗಳಿಂದ ವೇತನ ಹಾಗೂ ಇನ್ನಿತರ ನಿಖರವಾದ ವೆಚ್ಚಗಳ ಅಂದಾಜುಗಳನ್ನು ಸಂಕಲನ ಮಾಡಲು ಕರೆಯುವ ಪ್ರಪತ್ರವಾಗಿರುತ್ತವೆ. ಈ ಅಂದಾಜುಗಳನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿದ ನಂತರ ಅನುಮೋದಿಸಲ್ಪಟ್ಟ ಅಂಕಿಗಳನ್ನು ಆಯವ್ಯಯದಲ್ಲಿ ಸೇರಿಸಲಾಗುತ್ತದೆ. ಈ ಪ್ರಪತ್ರಗಳ ಒಟ್ಟು